ಕ್ರೀಡಾಲೋಕ

# ಸ್ಯಾಂಟ್ನರ್ ಅಚ್ಚರಿ ಅಸ್ತ್ರ

**ನ್ಯೂಜಿಲೆಂಡ್ ನೆಲದಲ್ಲಿ ಅನಿವಾರ್ಯ ಬೌಲರ್ ಅಲ್ಲದ ಸ್ಯಾಂಟ್ನರ್, ಭಾರತದಲ್ಲಿ ತಮಗೆ ಸಿಕ್ಕ ಅವಕಾಶವನ್ನು ಜೀವಮಾನದ ಶ್ರೇಷ್ಠ ಸಾಧನೆಯನ್ನಾಗಿ ಪರಿವರ್ತಿಸಿಕೊಂಡರು.**

**■ ವಿಶಾಖ ಎನ್.**



ಕೆಲವು ಸಲ ಎದುರಾಳಿಗಳನ್ನು ಪುಡಿಗಳು ಎಂದುಕೊಂಡುಬಿಡುವ ಜಾಯಮಾನ ಭಾರತದ ಬ್ಯಾಟರುಗಳದ್ದು. ಅದರಲ್ಲೂ ದೇಸಿ ಪಿಚ್ ಅಂದರಂತೂ ಯಾವ ಸ್ಪಿನ್ನರ್ ಏನು ಮಾಡಿಯಾನು ಎನ್ನುವ ಅಖಂಡ ಆತ್ಮವಿಶ್ವಾಸ. ನೆಟ್ಸ್‌ನಲ್ಲಿ ಅಭ್ಯಾಸ ಮಾಡುವಾಗ ರವಿಚಂದ್ರನ್ ಅಶ್ವಿನ್, ಕುಲದೀಪ್ ಯಾದವ್, ವಾಷಿಂಗ್ಟನ್ ಸುಂದರ್ ಅವರಂತಹ ವೈವಿಧ್ಯಮಯ ಸ್ಪಿನ್ನರ್‌ಗಳು ಇರುವಾಗ ಬೇರೆ ತಂಡದವರ ಸ್ಪಿನ್ ಅಸ್ತ್ರ ಏನಾದರೂ ಮಾಡೀತು ಎನ್ನುವ ಸಹಜ ನಂಬುಗೆ. ಅದನ್ನು ಅಲ್ಲಾಡಿಸುವಂತಹ ಪೆಟ್ಟನ್ನು ಪುಣೆಯಲ್ಲಿ ನಡೆದ ಕ್ರಿಕೆಟ್ ಟೆಸ್ಟ್‌ನಲ್ಲಿ ಕೊಟ್ಟವರು ನ್ಯೂಜಿಲೆಂಡ್‌ನ ಮಿಚೆಲ್ ಸ್ಯಾಂಟ್ನರ್.

ಪುಣೆಯಲ್ಲಿ ನಡೆದ ಟೆಸ್ಟ್ ಪಂದ್ಯದ ಮೊದಲ ದಿನ ಭಾರತದ ಎಡಗೈ ಸ್ಪಿನ್ನರ್ ವಾಷಿಂಗ್ಟನ್ ಸುಂದರ್ 7 ವಿಕೆಟ್ ಕಿತ್ತರು. ಅವರು ಸಾಮಾನ್ಯವಾಗಿ ಪ್ರತಿ ಗಂಟೆಗೆ 90 ಕಿ.ಮೀ. ವೇಗದಲ್ಲಿ ಎಸೆತಗಳನ್ನು ಹಾಕುವುದು. ಆ ದಿನ ಪಿಚ್‌ನ ಒಂದು ಜಾಗದಲ್ಲಿ ಒರಟಾದ ಮೇಲ್ಮೈ ಇತ್ತು. ಅದರ ಆಸುಪಾಸಿನಲ್ಲೇ ಅವರು ತುಸು ವೇಗ ಬದಲಿಸಿ ಬೌಲ್ ಮಾಡಿದ್ದು ಫಲ ಕೊಟ್ಟಿತು. ವಿಕೆಟ್ ಗುರಿಯಾಗಿಸಿಕೊಂಡು ಹೀಗೆ ಎಸೆತಗಳನ್ನು ಹಾಕಿದ್ದರಿಂದಲೇ ಏಳು ವಿಕೆಟ್‌ಗಳು ಸಿಕ್ಕವು.

ಭಾರತ ಮೊದಲ ಇನ್ನಿಂಗ್ಸ್‌ನಲ್ಲಿ ನ್ಯೂಜಿಲೆಂಡ್ ತಂಡಕ್ಕೆ 300 ರನ್ ಗಡಿ ದಾಟಲು ಬಿಡಲಿಲ್ಲ. ಹಾಗೊಂದು ಸಮಾಧಾನ ತವರಿನ ಅಭಿಮಾನಿಗಳಲ್ಲಿ ಹೆಚ್ಚು ಕಾಲ ಉಳಿಯದಂತೆ ಮಾಡಿದ್ದು ಎದುರಾಳಿ ತಂಡದ ಸ್ಯಾಂಟ್ನರ್. ಅವರು ವಾಶಿ ಹೇಳಿಕೊಟ್ಟ ಪಾಠವನ್ನು ಕಣ್ಣಿಗೆ ಒತ್ತಿಕೊಂಡರು.

ಮಜಾ ಅಂದರೆ, ವಿರಾಟ್ ಕೊಹ್ಲಿ ಈ ಎಡಗೈ ಸ್ಪಿನ್ನರ್ ಹಾಕಿದ ಸ್ಲೋ ಫುಲ್ಟಾಸ್‌ಗೆ ಪುಣೆ ಟೆಸ್ಟ್ ಮೊದಲ ಇನ್ನಿಂಗ್ಸ್‌ನಲ್ಲಿ ಬೌಲ್ಡ್ ಆದದ್ದು. ಸಾಮಾನ್ಯವಾಗಿ ಕೊಹ್ಲಿ ತರಹದ ಬ್ಯಾಟರುಗಳು ಅಂತಹ ಎಸೆತವನ್ನು ಸಿಕ್ಸರ್ ಆಗಿ ಪರಿವರ್ತಿಸುತ್ತಾರೆ. ಆದರೆ, ಆ ದಿನ ಪಿಚ್‌ನಲ್ಲಿ ಭೂತ ಅಡಗಿದೆಯೇನೋ ಎಂಬಂತೆ ತಲೆಯಲ್ಲಿ ಹುಳವಿತ್ತು. ಹೀಗಾಗಿ ಕೊಹ್ಲಿ ಅಂತಹ ದುರ್ಬಲ ಎಸೆತಕ್ಕೂ ದಂಡ ತೆತ್ತಿದ್ದಕ್ಕೆ ಪೆಚ್ಚುಮೋರೆ ಹಾಕಿಕೊಳ್ಳಬೇಕಾಯಿತು.

ಸ್ಯಾಂಟ್ನರ್ ನ್ಯೂಜಿಲೆಂಡ್ ನೆಲದಲ್ಲಿ ಅನಿವಾರ್ಯ ಬೌಲರ್ ಏನೂ ಅಲ್ಲ. ಯಾಕೆಂದರೆ, ಮೈಕೆಲ್ ಬ್ರೇಸ್ವೆಲ್ ಈಗ ಆಲ್ ರೌಂಡರ್ ರೂಪದಲ್ಲಿ ಆ ತಂಡಕ್ಕೆ ಒದಗಿದ್ದಾರೆ. ಅವರಿಗೆ ಫಿಟ್ನೆಸ್ ಸಮಸ್ಯೆ ಇದ್ದ ಕಾರಣ ಸ್ಯಾಂಟ್ನರ್ ಭಾರತದಲ್ಲಿ ಆಡುವ ಅವಕಾಶ ಪಡೆದರು. ಆ ಅವಕಾಶವನ್ನು ಅವರು ಜೀವಮಾನದ ಶ್ರೇಷ್ಠ ಸಾಧನೆಯನ್ನಾಗಿ ಪರಿವರ್ತಿಸಿಕೊಂಡಿದ್ದು ಈಗ ಕಣ್ಣಿಗೆ ಕಟ್ಟಿದ ಹಾಗೆ ಇದೆ.

ನ್ಯೂಜಿಲೆಂಡ್‌ನಲ್ಲಿ ನಾರ್ದರ್ನ್ ಡಿಸ್ಟ್ರಿಕ್ಟ್ಸ್ ತಂಡದ ಪರವಾಗಿ ಈ ಎಡಗೈ ಸ್ಪಿನ್ನರ್ ಬೌಲಿಂಗ್ ಮಾಡುತ್ತಾರೆ. ಅಲ್ಲಿ ಇವರಿಗೆ ಒಂದು ಅಡ್ಡ ಹೆಸರಿದೆ. ಅದೇ 'ಫ್ಲ್ಯಾಟ್ ಲೈನ್'. ಈ ಪದಪುಂಜಕ್ಕೆ ಧ್ವನ್ಯಾರ್ಥ ಇದೆ. ಎದುರಾಳಿ ಎಷ್ಟೇ ಕಾಡಿದರೂ ಇವರು ತಾಳ್ಮೆ ಕಳೆದುಕೊಳ್ಳದೆ ಇರುತ್ತಾರೆ ಎನ್ನುವ ಕಾರಣಕ್ಕೆ ಬಂದ ಅಡ್ಡಹೆಸರು ಇದು. ಪುಣೆಯ ಟೆಸ್ಟ್‌ನಲ್ಲಿ ಕೂಡ ಅವರಿಗೆ ಈ ಗುಣವಿಶೇಷಣ ಅನ್ವರ್ಥ ಎನ್ನುವಂತೆ ಕಂಡಿತು. 53 ರನ್ ಮಾತ್ರ ನೀಡಿ 7 ವಿಕೆಟ್‌ಗಳ ಗುಚ್ಛ ತಮ್ಮದಾಗಿಸಿಕೊಂಡ ಮೇಲೂ ಅವರ ಮುಖದ ಗೆರೆಗಳು ಹೆಚ್ಚೇನೂ ಬದಲಾಗಲಿಲ್ಲ. ಮುಷ್ಟಿ ಬಿಗಿ ಮಾಡಿ ಅವರು ಸಂಭ್ರಮವನ್ನು ಕೂಡ ತಣ್ಣಗೆ ತೋರ್ಪಡಿಸುವವರ ಪೈಕಿ.

ಶ್ರೀಲಂಕಾದ ಎಡಗೈ ಸ್ಪಿನ್ನರ್ ರಂಗನ ಹೇರತ್ ಈಗ ನ್ಯೂಜಿಲೆಂಡ್ ತಂಡದ ಬೌಲಿಂಗ್ ಕೋಚ್. ಏಷ್ಯಾ ಖಂಡದ ದೇಶಗಳ ಪಿಚ್ ಹೇಗೆ ವರ್ತಿಸುತ್ತವೆ ಎನ್ನುವ ಕುರಿತು ಅವರು ಇತ್ತೀಚೆಗೆ ಅನುಕೂಲಕರ ಸಲಹೆಗಳನ್ನು ಸ್ಯಾಂಟ್ನರ್ ಅವರಿಗೆ ಕೊಟ್ಟಿದ್ದರು. ಅದು ಕೂಡ ತಮ್ಮ ನೆರವಿಗೆ ಬಂದಿದ್ದಾಗಿ ಎಡಗೈ ಸ್ಪಿನ್ನರ್ ಪಂದ್ಯದ ನಂತರ ಹೇಳಿದರು.

ನ್ಯೂಜಿಲೆಂಡ್ ತಂಡದ ಈಗಿನ ಪ್ರಮುಖ ಸ್ಪಿನ್ನರ್ ಎಜಾಜ್ ಪಟೇಲ್. ಎರಡನೇ ಆಯ್ಕೆ ಬ್ರೇಸ್ವೆಲ್. ಆ ಹೊರತಾಗಿಯೂ ಸ್ಯಾಂಟ್ನರ್ ಚೆಂಡಿನ ಗತಿಯಲ್ಲಿ ಗಣನೀಯ ಬದಲಾವಣೆ ಮಾಡುವ ಮೂಲಕ ವಿಕೆಟ್‌ಗಳನ್ನು ಕಿತ್ತರು. 103 ರನ್ ಗೆಲುವಿನ ಪಂದ್ಯದಲ್ಲಿ ಅವರು 13 ವಿಕೆಟ್ ಕಿತ್ತು ಕಾಣಿಕೆ ಇತ್ತರು. ಇದಕ್ಕೆ ಮೊದಲು ದಕ್ಷಿಣ ಆಫ್ರಿಕಾ ಎದುರು 3 ವಿಕೆಟ್ ಪಡೆದದ್ದೇ ಅವರ ವೈಯಕ್ತಿಕ ಶ್ರೇಷ್ಠ ಇನ್ನಿಂಗ್ಸ್ ಸಾಧನೆ ಎನಿಸಿಕೊಂಡಿತ್ತು. ಇಷ್ಟು ಪ್ರಭಾವಿ ಆಗಬಹುದು ಎಂದು ಭಾರತದ ಬ್ಯಾಟರ್‌ಗಳು ಅಂದಾಜು ಮಾಡಿರಲಿಲ್ಲ. ಸ್ಯಾಂಟ್ನರ್ ಈಗ ನ್ಯೂಜಿಲೆಂಡ್‌ನ ನ್ಯಾಷನಲ್ ಹೀರೊ.

ಪ್ರತಿಕ್ರಿಯಿಸಿ: feedback@sudha.co.in